



ಸ್ವಲ್ಪ ಯಾಮಾರಿದರೂ ಪೊಲೀಸರ ಬಂಧನಕ್ಕೆ ಒಳಗಾಗಬೇಕಾಗುತ್ತದೆ. ಬೆರಳೆಣಿಕೆಯಷ್ಟೇ ಇರುವ ಚತುರ ಪತ್ತೆದಾರಿ ಏಜೆನ್ಸಿಗಳು ಮೈಗೆ ಎಣ್ಣೆಹಚ್ಚಿಕೊಂಡೇ ಕಾರ್ಯತತ್ಪರವಾಗಿವೆ. ಹೀಗಾಗಿ ಅವುಗಳಿಗೆ ಸಿಕ್ಕಿಹಾಕಿಕೊಳ್ಳುವ ಆತಂಕವಿಲ್ಲ. ಯಾರೋ ಗ್ರಾಹಕ ಬಂದು, ತನ್ನ ಹೆಂಡತಿಯ 'ಕಾಲ್ ಲಾಗ್ ಬೇಕಾಗಿದೆ' ಎಂದಷ್ಟೇ ಕೇಳಿದರೆ, ಇಂತಹ ಕಂಪನಿಗಳು ಅದಕ್ಕೆ ಸುತರಾಂ ಒಪ್ಪುವುದಿಲ್ಲ.

ಇಷ್ಟಕ್ಕೂ, ನಿಯಂತ್ರಣ ಎನ್ನುವುದು ಇಂತಹ ಕಂಪನಿಗಳಿಗೆ ಬೇಕಾ ಎಂಬ ಮುಖ್ಯವಾದ ಪ್ರಶ್ನೆ ಉದ್ಭವಿಸುತ್ತದೆ. ಬಹುತೇಕ ಕಂಪನಿಗಳು 'ಬೇಡ' ಎಂದೇ ಇದಕ್ಕೆ ಉತ್ತರಿಸುತ್ತವೆ. ಆದರೆ, ತಮ್ಮ ಕಾರ್ಯವ್ಯಾಪ್ತಿಯನ್ನು ಗುರುತಿಸುವಂತಹ ಕಾನೂನಿನ ಅಗತ್ಯವಿದೆ ಎನ್ನುತ್ತಾರೆ. ಮೂರ್ತ ಸಾಂಸ್ಥಿಕ ರೂಪ ಪಡೆಯದೆ, ಹೇಳಿಕೊಳ್ಳುವಂತಹ ಸಂಘಟನೆ ಇಲ್ಲದೆ, ಆರ್ಥಿಕ ಹಿಂಜರಿತದ ಸನ್ನಿವೇಶದಲ್ಲೂ ವ್ಯವಹಾರದಲ್ಲಿ ಒಂದೂವರೆ ದಶಕದಿಂದ ದಾಪುಗಾಲಿಟ್ಟಿರುವ ಪತ್ತೆದಾರಿ ಉದ್ಯಮದ ಬಗೆಗೆ ತಲಸ್ಪರ್ಶಿ ಅಧ್ಯಯನಕ್ಕೆ ವಿಪುಲ ಅವಕಾಶಗಳಂತೂ ಇವೆ. ಅದಕ್ಕೂ ಯಾರಾದರೂ ಶೆರ್ಲಾಕ್ ಹೋಮ್ಸ್ ಆಗಬೇಕಾದೀತು!

## ಸುತ್ತಮುತ್ತಲು ಕುತೂಹಲದ ಕಣ್ಣುಗಳು

ಯಾರಿಗೂ ಕಾಣದೆ ಹೋದುದು ಪತ್ತೆದಾರರಿಗೆ ಕಾಣಿಸುತ್ತದೆಯಲ್ಲವೇ? ಇವತ್ತಿನ ಸಂದರ್ಭ ನೋಡಿದರೆ, ಇಡೀ ವಿಶ್ವವೇ ಆಧುನಿಕತೆ ಎನ್ನುವ ಪತ್ತೆದಾರನ ಕಣ್ಗಾವಲಿನಲ್ಲಿದೆ. ಮೊಬೈಲ್ ಫೋನ್, ಸಿಸಿ ಟೀವಿ ಕ್ಯಾಮೆರಾ, ಅಂತರ್ಜಾಲ, ಆಧಾರ್ – ಹೀಗೆ ಹತ್ತು ಹಲವು ಕಾರಣಗಳಿಂದ ಸಾರ್ವಜನಿಕ ಜೀವನದಲ್ಲಿ ಖಾಸಗಿತನ ಎನ್ನುವುದು ಸಾಧ್ಯವೇ ಇಲ್ಲ ಎನ್ನುವಂತಹ ಪರಿಸ್ಥಿತಿಯಿದೆ. ನಮ್ಮ ಪ್ರತಿ ಚಟುವಟಿಕೆಯನ್ನೂ ಯಾವುದೋ ಅದೃಶ್ಯ ಕಣ್ಣೊಂದು ವೀಕ್ಷಿಸುತ್ತಿದೆ ಎನ್ನುವುದೀಗ ಅಲೌಕಿಕ ಕಲ್ಪನೆಯಾಗಿ ಉಳಿಯದೆ, ವಸ್ತುಸ್ಥಿತಿಯಾಗಿದೆ. ಇಂಥ ಸಂದರ್ಭದಲ್ಲಿ ಪತ್ತೆದಾರರ ಕಣ್ಣುಗಳೂ ಸಮಾಜವನ್ನು ಬಗೆಬಗೆದು ನೋಡುತ್ತಿವೆ.

ಪತ್ತೆದಾರ ಎನ್ನುವುದೀಗ ವ್ಯಕ್ತಿಯಲ್ಲ; ಅದೊಂದು ವ್ಯವಸ್ಥೆ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in